# ಧೂಪದ ಗಿಂಡಿ

ನೀರವವಾದ ಈ ಕೋಣೆಯ
ಜೋಡಿ ಪಲ್ಲಂಗದ ಪಟದಲಿ
ದಿನವೂ ಊಡುತಿದ್ದ ಪಗಡೆಯ ಆಟ
ಈಗ ಮುಗಿದು ಹೋಗಿದೆ

ಆಗಾಗ ಬಂದು ಹೋಗುವ
ನಿಟ್ಟುಸಿರು ಮೈ ಮುರಿಕೆಯ ಹೊರತು
ಎಂದು ಅತ್ತ ಹೊರಳದೆ
ಮಗ್ಗಲೊಂದು ಖಾಲಿಯಾಗಿ
ಇಬ್ಬರ ನಡುವೆ ಮಲಗಿಕೊಂಡಿದೆ

ಒಂದೊಮ್ಮೆ
ದೃಢ ತೊಡೆಗಳ
ವಜ್ರ ಜಂಘನು ಅವನು
ನಾನು ಶ್ರೀಮತಿ ಪದುಮನಾಭಿನಿ

ಸಾಂಗವಾಗಿ ಮುಪ್ಪುರಿಯುತಿದ್ದವು
ಧೂಪದ ಹರಳು ದಟ್ಟ ಹೊಗೆ ಸೂಸುತ ಇಲ್ಲಿ

ಈಗ
ಧೂಪದ ಗಿಂಡಿ ಮೂಲೆ ಸೇರಿದೆ
ಇನ್ನಾವ ಜೋಡಿಯೂ ಆಗಲಬಾರದೆಂಬಂತೆ
ಅಪ್ಪುಗೆಯೇ ಅಂತ್ಯವಾಗಬಾರದೆಂಬಂತೆ

ಸವೆಸಲಾಗದ ಏಕಾಂತವ
ಪಲ್ಲಂಗದ ಮೇಲೆ ಮಲಗಿಸಿ
ಧೂಪದ ಗಿಂಡಿ
ಮೂಲೆ ಸೇರಿದೆ

